ಅ) ಅನುದಾನ ರಹಿತ ಶಾಲೆಗಳು ವಿಶೇಷ ಶುಲ್ಕ ಮತ್ತು ವಂತಿಗೆ ಪಡೆಯುವುದನ್ನು ನಿಷೇಧಿಸಿರುವ ಆದೇಶಕ್ಕೆ ಕರ್ನಾಟಕ ಉಚ್ಚನ್ಯಾಯಾಲಯವು ತಡೆ ಹಿಡಿದಿರುವುದು ಗೊತ್ತಿದೆಯೇ ?

ಆ) ಕಾನೂನು ಬಾಹಿರ ವಂತಿಗೆ ವಸೂಲಿ ಮಾಡುವುದನ್ನು ನಿಲ್ಲಿಸಲು ಹಾಗೂ ಕರ್ನಾಟಕದ ಉಚ್ಚ ನ್ಯಾಯಾಲಯವು ಕೊಟ್ಟಿರುವ ತಡೆಯಾಜ್ಞೆಯನ್ನು ತೆರವು ಮಾಡಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ರಘುಪತಿ (ಮಾನ್ಯ ವಿದ್ಯಾ ಮಂತ್ರಿಗಳು).—

ಅ) ಹೌದು.

ಆ) ಗೊತ್ತಿದೆ.

ಇ) ಈ ಬಗ್ಗೆ ಸರ್ಕಾರದಿಂದ ಅಧಿಕಾರ ಹೊಂದಿರುವ ಅಧಿಕಾರಿಗಳು ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಈ) ತಡೆಯಾಜ್ಞೆ ತೆರವು ಮಾಡಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಐ. ಆರ್. ಡಿ. ಸ್ಕೀಂ ಬಗ್ಗೆ

೧೧೫ (೧೯) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಕ್ಷ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ:—

ಅ) ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಲ್ಲಿ ಪ್ರಯೋಜನ ಪಡೆದ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನಗಳು ಎಷ್ಟು ? ಮತ್ತು ಈ ಯೋಜನೆಯಲ್ಲಿ ಪ್ರಯೋಜನ ಪಡೆದ ಒಟ್ಟು ಜನಗಳೆಷ್ಟು ?

ಆ) ಈ ಯೋಜನೆಯಲ್ಲಿ ಇನ್ನೂ ಹೆಚ್ಚಿನ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ವಿಸ್ತರಿಸಲು ಸರ್ಕಾರಕ್ಕೆ ಇರುವ ತೊಂದರೆಗಳಾದರು ಏನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ಪಕ್ಷ ಮಂತ್ರಿಗಳು).—

ಅ) ಪರಿಶಿಷ್ಟ ಜಾತಿ — ೧,೭೭,೯೧೬
ಪರಿಶಿಷ್ಟ ಪಂಗಡದವರು — ೧೧,೬೧೧
ಒಟ್ಟು ಪ್ರಯೋಜನದಾರರು — ೭,೬೦,೦೮೮ (ಆರನೆ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ)

ಆ) ತೊಂದರೆಗಳು ಏನೂ ಇರುವುದಿಲ್ಲ.

Primary Schools in Athani Constitutuency

116 (320) Smt. LEELADEVI R. PRASAD (Athani).—will the Minister of state for primary and Adult Education be pleased to State :—

(1) The total number of primary school in Athani Constituency out of them, the number of schools that are being run in their own building and the number of school that are being run in the rented buildings ?